ಜನರ ಕಷ್ಟಕ್ಕೆ ಸ್ಪಂದಿಸಿದರೆ ಮತ್ತೆ ಗೆಲ್ಲಬಹುದು

# ಹೊಸ ಶಾಸಕರಿಗೆ ಸಿಎಂ ಸಿದ್ದು ಪಾಠ

"ಜನರು 70 ಹೊಸಬರನ್ನು ಆಯ್ಕೆ ಮಾಡಿರುವುದನ್ನು ಗಮನಿಸಿದರೆ ನಿಮ್ಮಿಂದ ಏನೋ ಹೊಸತನ ನಿರೀಕ್ಷೆ ಮಾಡುತ್ತಿದ್ದಾರೆ. ಹಾಗಾಗಿ ಅವರ ನಿರೀಕ್ಷೆಗೆ ತಕ್ಕಂತೆ ಕೆಲಸ ಮಾಡಿ.

■ **ಎಚ್.ಕೆ.ಪಾಟೀಲ್,** ಸಂಸದೀಯ ವ್ಯವಹಾರಗಳ ಸಚಿವ



**ಬೆಂಗಳೂರು:** ಹಣವಿದ್ದರೆ ಚುನಾವಣೆ ಗೆಲ್ಲಬಹುದು ಎಂಬುದು ಸುಳ್ಳು, ಜನರ ಕಷ್ಟಕ್ಕೆ ಸ್ಪಂದಿಸಿ, ಅವರ ಬಗ್ಗೆ ಅಸಹ್ಯಪಡದೆ ಕೆಲಸ ಮಾಡುವವರು ಮಾತ್ರ ಮತ್ತೆ ಗೆಲ್ಲಬಹುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸಲಹೆ ನೀಡಿದರು.

ವಿಧಾನಸಭೆಗೆ ಮೊದಲ ಬಾರಿ ಆಯ್ಕೆಯಾದ ಶಾಸಕರಿಗೆ ನೆಲಮಂಗಲದ ಎಸ್‌ಡಿಎಂ ಇನ್‌ಸ್ಟಿಟ್ಯೂಟ್ ಆಫ್ ನ್ಯಾಚುರೋಪತಿ ಅಂಡ್ ಯೋಗಿಕ್ ಸೈನ್ಸಸ್‌ನ ಕ್ಷೇಮವನದಲ್ಲಿ ಹಮ್ಮಿಕೊಂಡ ಮೂರು ದಿನಗಳ ತರಬೇತಿ ಶಿಬಿರವನ್ನು ಸೋಮವಾರ ಉದ್ಘಾಟಿಸಿ ಅವರು ಮಾತನಾಡಿದರು.

ಜನಸೇವೆ ಮರೆತು ರಾಜಕಾರಣದಲ್ಲಿ ಧಿಮಾಕು, ಅಧಿಕಾರದ ಮದ ಹೆಚ್ಚಾದರೆ ಜನ ಪಾಠ ಕಲಿಸುತ್ತಾರೆ. ವಿಧಾನಸೌಧಕ್ಕೆ ಬರುವ ಆಸೆಯ ಜತೆ ಸದನಕ್ಕೆ ಬರುವ ಜವಾಬ್ದಾರಿಯನ್ನು ಸಹ ಮರೆಯಬಾರದು. ವಿಧಾನಸೌಧದಲ್ಲಿರುವ ಗ್ರಂಥಾಲಯವನ್ನು ಚೆನ್ನಾಗಿ ಬಳಸಿಕೊಳ್ಳಿ, ಓದಿ ತಿಳಿದುಕೊಂಡಷ್ಟೂ ಮಾತನಾಡುವ ಸಾಮರ್ಥ್ಯ ಹೆಚ್ಚುತ್ತದೆ. ಕಾಂಗ್ರೆಸ್‌ನಲ್ಲಿ ಗೆದ್ದಿದ್ದರೂ ಈಗ ನಾನು ಮುಖ್ಯಮಂತ್ರಿ, ಕಾಂಗ್ರೆಸ್ ಪಕ್ಷದ ಮುಖ್ಯಮಂತ್ರಿಯಲ್ಲ. ನಾನು ರಾಜ್ಯದ 7 ಕೋಟಿ ಜನರ ಮುಖ್ಯಮಂತ್ರಿಯಾಗಿ ಪಕ್ಷಾತೀತವಾಗಿ ಶಾಸಕರಿಗೆ ಸಹಕಾರ ಮಾಡುವೆ ಎಂದರು.

➡ 2

## 55 ಶಾಸಕರು ಭಾಗಿ

ಈ ತರಬೇತಿ ಶಿಬಿರಕ್ಕೆ 70 ಹೊಸ ಶಾಸಕರ ಪೈಕಿ 55 ಶಾಸಕರು ಭಾಗಿಯಾಗಿದ್ದಾರೆ. ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಮತ್ತು ಪಕ್ಷೇತರವಾಗಿ ಗೆಲುವು ಪಡೆದಿರುವ ಶಾಸಕರು ತರಬೇತಿಯಲ್ಲಿ ಭಾಗವಹಿಸಿದ್ದಾರೆ. ನೆಲಮಂಗಲ ಶಾಸಕ ಎನ್. ಶ್ರೀನಿವಾಸ್ ಕ್ಷೇತ್ರದಲ್ಲಿ ತರಬೇತಿ ನಡೆಯುತ್ತಿರುವ ಹಿನ್ನೆಲೆಯಲ್ಲಿ ವಿಶೇಷ ವ್ಯವಸ್ಥೆ ಕಲ್ಪಿಸಿದ್ದಾರೆ.

"ಪ್ರತಿಯೊಬ್ಬರೂ ಸಿಕ್ಕಿದ ಅವಕಾಶ ಸದುಪಯೋಗಿಸಿಕೊಳ್ಳಬೇಕು. ದುಶ್ಚಟ, ದ್ವೇಷರಹಿತ ಸಮಾಜ ಕಟ್ಟುವ ಪ್ರಯತ್ನ ಮಾಡಬೇಕು. ವೈದ್ಯರಾಗಲು, ವಕೀಲರಾಗಲು, ಇಂಜಿನಿಯರ್ ಆಗಲು ಕಾಲೇಜುಗಳಿವೆ. ರಾಜಕಾರಣಿಯಾಗಲು ಕಾಲೇಜಿಲ್ಲ. ಆದ್ದರಿಂದ ರಾಜಕೀಯ ಪ್ರವೇಶ ಮಾಡುವವರಿಗೆ ಒಂದು ಕಾಲೇಜು ಆರಂಭಿಸುವ ಚಿಂತನೆ ಇದೆ.

■ **ಯು.ಟಿ.ಖಾದರ್,** ವಿಧಾನಸಭಾಧ್ಯಕ್ಷ